**ಸಿ.ಸಿ. ನಂಬ್ರ 1089/2023** **ಡಿ.ಡಬ್ಲ್ಯೂ- 1**

ದಿನಾಂಕಃ ***06-02-2025*** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು.

ಆರೋಪಿಯ ಮುಂದುವರೆದ ಮುಖ್ಯ ವಿಚಾರಣೆ ಃ ಆರೋಪಿ ಪರ ವಕೀಲರಾದ ಶ್ರೀ. ಎಸ್ ಜಿ ಎಸ್ ರವರಿಂದ

ನಾನು ಉದಯಕುಮಾರ ಶೆಟ್ಟಿ ರವರಿಗೆ ಚೆಕ್ಕು ಕೊಡವ ಸಮಯದಲ್ಲಿ ನನ್ನ ಖಾತೆ ಡಾರ್ ಮೇಟ್ ಆಗಿರಲಿಲ್ಲ. ಸಂದೀಪಕುಮಾರ ಶೆಟ್ಟಿ ರವರಿಂದ ತಪ್ಪಾಗಿ ನೋಟಿಸು ಬಂದಿರುವುದಾಗಿ ಹೇಳಿದ್ದರಿಂದ, ದೂರನ್ನು ನೀಡಿರುವುದಿಲ್ಲ. ನಾನು ಉಡುಪಿಯ ಹೆಚ್. ರತ್ನಾಕರ ಶೆಟ್ಟಿ ಎಂಬ ವಕೀಲರನ್ನು ಭೇಟಿ ಮಾಡಿ ವಿಷಯ ತಿಳಿಸಿದಾಗ, ಅವರು ಕ್ರಿಮಿನಲ್ ಪ್ರಕರಣ ದಾಖಲಿಸುವುದಾದರೆ ಉದಯಕುಮಾರ ಶೆಟ್ಟಿರವರನ್ನು ಕೂಡ ಸೇರಿಸಿ ದಾಖಲಿಸಿಬೇಕೆಂದು ಹೇಳಿರುತ್ತಾರೆ. ಆ ಸಮಯಕ್ಕೆ ನ್ಯಾಯಾಲಯದಿಂದ ನೋಟಿಸು ಬಂದಿತ್ತು. ನಂತರ ನನಗೆ

ಬೇರೆ ವಕೀಲರನ್ನು ರೇಪರ್ ಮಾಡಿರುತ್ತಾರೆ. ನನಗೆ **3-4** ವರ್ಷಗಳಿಂದ ಆರೋಗ್ಯ ಸಮಸ್ಯೆ ಇತ್ತು. ಈ ವಕೀಲರ ಬಳಿ ಬಂದಾಗ ದೂರು ನೀಡಬೇಕೆಂಬುದರ ಬಗ್ಗೆ ಮರೆತು ಹೋಯಿತು.

ನಾನು ಈ ನ್ಯಾಯಾಲಯದಲ್ಲಿ ಸಂದೀಪಕುಮಾರ ಶೆಟ್ಟಿ ರವರನ್ನು ನೋಡಿರುವುದನ್ನು ಹೊರತುಪಡಿಸಿ ಬೇರೆ ಎಲ್ಲೂ ಸಂಪರ್ಕಿಸಿಲ್ಲ. ನಂತರ ನನ್ನ ಸಂಬಂಧಿಕರ ಬಳಿ ವಿಚಾರಿಸಿದಾಗ ಸಂದೀಪಕುಮಾರ ಶೆಟ್ಟಿ ಅರವಿಂದ ಹೆಗ್ಡೆ ರವರ ಸಂಬಂಧಿ ಎಂದು ಗೊತ್ತಾಯಿತು. ಅರವಿಂದ ಹೆಗ್ಡೆ ದುಬೈ ಇರುವುದಾಗಿ ಗೊತ್ತಾಯಿತು. ನಂತರ ನಾನು ಅವರ ಪಾಸಪೋರ್ಟ ವಿವರ ಪಡೆಯಲು ಕೋಟಾ ಪೊಲೀಸ ಠಾಣೆಗೆ ಹೋಗಿದೆ. ಪೋಲಿಸರು ಪಾನ ಕಾರ್ಡ ಮತ್ತು ಆಧಾರ ಕಾರ್ಡ ಇಲ್ಲದೇ ವಿವರ ಪಡೆಯಲು ಸಾಧ್ಯವಿಲ್ಲ ಎಂದು ಹೇಳಿದರು. ನಂತರ ಲೆಕ್ಕ ಪರಿಶೋಧಕರನ್ನು ಸಂಪರ್ಕಿಸಿದಾಗ ಆದಾಯ ತೆರಿಗೆ ರಿಟರ್ನ ಪಡೆದುಕೊಳ್ಳಲು ಹೇಳಿದರು. ಅದಕ್ಕೆ ನಾನು ಆ ದಾಖಲೆ ಪಡೆದುಕೊಳ್ಳಲು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ನನಗೂ ಮತ್ತು ಉದಯಶೆಟ್ಟಿ ವಕೀಲರಿಗೂ ಬೇರೆ ಯಾವುದೇ ವ್ಯವಹಾರ ಇಲ್ಲ. ಆದ್ದರಿಂದ ಈ ಪ್ರಕರಣದಿಂದ ನನ್ನನ್ನು ಖುಲಾಸೆಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಫಿರ್ಯಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ. ಇದೆ.

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ.